ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಒಂದುವೇಳೆ ಕನ್ನಡ ಕಲಯುವುದಕ್ಕೆ ಸಾಧ್ಯವಿದ್ದರೆ ಕಲಯುತ್ತಾರೆ ಮತ್ತು ಒಂದುವೇಳೆ ಅವರ ಮಾತೃಭಾಷೆ ಕನ್ನಡವಾಗಿರಾರದೆ ಇದ್ದರೆ ಕನ್ನಡ ಕಲಯಲೇ ಬೇಕು, ಕಲಯದ ವಿನಾ ಮಂತ್ರಿಯಾಗುವುದಕ್ಕೆ ಸಾಧ್ಯವಿಲ್ಲ ಎಂದು ಒತ್ತಾಯ ಹೇರುವುದು ಸಾಧುವಾದುದಲ್ಲ. ಬಾರ್ಡರ್ ಏರಿಯಾದಿಂದ ಬರುವಂಥ ಅನೇಕ ಜನರಿಗೆ ತೆಲುಗು, ಮರಾಠಿ, ತಮಿಳು ಭಾಷೆ ಬರುತ್ತದೆ. ಮೈಸೂರು ರಾಜ್ಯದಲ್ಲಿ ಮಂತ್ರಿಯಾಗಿ ಅಂಥವರೂ ಕೆಲಸ ಮಾಡುತ್ತ ಇರುತ್ತಾರೆ. ಅವರಿಗೆ ಕನ್ನಡದ ಜ್ಞಾನ ಬೇಕು. ಅವರಿಗೆ ಅಷ್ಟರಮಟ್ಟಿನ ಜ್ಞಾನವಿದೆ, ಮಾತನಾಡಲಿಕ್ಕೆ ಬರುತ್ತದೆ, ಅರ್ಥವಾಗುತ್ತದೆ. ಬರೆಯುವುದಕ್ಕೆ, ಓದುವುದಕ್ಕೆ ಬರುವುದಿಲ್ಲ.

Sri B. B. SAYANAK.—May I know since how many years the Hon. Minister for Transport and Tourism is Minister here, in Mysore State ?

Sri VEERENDRA PATIL.—He is Minister since 1967.

ಶ್ರೀ ಎಚ್. ಸಿದ್ದವೀರಪ್ಪ.—ಕನ್ನಡ ಭಾಷೆಯನ್ನು ಅವರೆಲ್ಲ ಅರ್ಥ ಮಾಡಿಕೊಳ್ಳಬೇಕಾದರೆ ಎಲ್ಲ ಭಾಗದ ಕನ್ನಡಿಗರೂ ಅರ್ಥ ಮಾಡಿಕೊಳ್ಳತಕ್ಕ ಒಂದು ಕನ್ನಡ ಭಾಷೆಯನ್ನು ಸುಲಭವಾದ ರೀತಿಯಿಂದ ಕಲಯಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರಿಗೂ ಮಾಡಬೇಕಾಗುತ್ತದೆ; ಕೇವಲ ಮಂತ್ರಿಗಳಿಗಲ್ಲ. ಎಲ್ಲರಿಗೂ ಆ ರೀತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎರ್. ಶ್ರೀಕಂಠಯ್ಯ.—ಕನ್ನಡದಲ್ಲಿ ಮಾತನಾಡುತ್ತಾರೆ ಎಂದು ಹೇಳಿದಿರಿ. ಹಾಗಾದರೆ ಕನ್ನಡದಲ್ಲಿ ಮಾತನಾಡುವುದನ್ನು ಅದರ ತಾತ್ಪರ್ಯ ಹೇಳುವುದಕ್ಕೆ ಎಕ್ಸ್‌ಪೆರಿಮೆಂಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಕನ್ನಡ ಅರ್ಥವಾಗುತ್ತದೆ. ಹಳ್ಳೇ ಮೈಸೂರು ಕನ್ನಡ ಬೇರೆ, ಬೀದರ್ ಕನ್ನಡ ಬೇರೆ, ಬೆಳಗಾಂವ ಕನ್ನಡ ಬೇರೆ ತರಹ ಆಗಿರುವುದರಿಂದ ಅವರು ಇಂಗ್ಲೀಷ್ ನಲ್ಲಿ ಹೇಳುತ್ತಾರೆ ಆದರೆ ಅವರಿಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಶಿಕ್ಷಣ ಮಾಧ್ಯಮ ಕನ್ನಡ ಹೀಗೆ ಎಲ್ಲಾ ಮಟ್ಟದಲ್ಲೂ ಕನ್ನಡ ಆಗಬೇಕು ಎಂದು ಇರುವುದರಿಂದ ಮಂತ್ರಿಗಳು ಕೂಡ ಕನ್ನಡದಲ್ಲಿ ಮಾತನಾಡುವುದು ಅಪೇಕ್ಷೀ ಅವಶ್ಯಕವಾಗಿರುವುದರಿಂದ ಅವರು ಓದು ಬರೆಯುವುದಕ್ಕೆ ಕಲಯಲು ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಇದಕ್ಕೆ ಸಾಕಷ್ಟು ಉತ್ತರ ಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಕನ್ನಡದಲ್ಲಿ ಕಾಗದ ಬರೆದರೆ ಅದಕ್ಕೆ ಉತ್ತರ ಕನ್ನಡದಲ್ಲಿ ಹೋಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಮಂತ್ರಿಗಳ ಆಫೀಸಿನಲ್ಲಿ ಪ್ರೈವೇಟ್ ಸೆಕ್ರೆಟರಿ ಇರುತ್ತಾರೆ ಸ್ಟೆನೋ ಇರುತ್ತಾರೆ. ಆದುದರಿಂದ ಕನ್ನಡದಲ್ಲಿ ಉತ್ತರ ಹೋಗುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಿದೆ.

Formation of Roads in Pavagada Taluk

136. Sri P. ANJANAPPA (Pavagada).—

Will the Minister for Public Works be pleased to state :—

(*a*) whether the P. W. D. will take over the road from Arsikere road in Pavagada to the road joining Devalakere road *via* Naliganahalli, Paradabetta, Mugadalabetta and from it ;

(*b*) whether the P. W. D. will form the road from Bugadur in Pavagada taluk to the road going to Thirupathi *via* Appajanahalli, Ryasabehussainpura ;

(SRI P. ANJANAPPA)

(*c*) whethar the P. W. D. will form the road from Valluru in Pavagada taluk to Venkatammanahalli;

(*d*) whether the P. W. D. will form the road from Dommakapuri in Pavagada taluk to Garalligatta ?

Sri BASAVARAJ MAGAVI (Deputy Minister for Public Works).—

(*a*) This will be considered.

(*b*), (*c*) and (*d*) No, since these roads are not P.W.D. roads.

ಶ್ರೀ ಪಿ. ಆಂಜನಪ್ಪ.—ಈ ರಸ್ತೆಗಳು ಲೋಕೋಪಯೋಗಿ ಇರಾಖೆಗೆ ಸೇರಿದವುಗಳಲ್ಲ ವಾದ್ದರಿಂದ ಮಾಡಿಸಲಾಗುವುದಿಲ್ಲ ಎಂದು ಉತ್ತರ ಹೇಳಿದೆ. ಹಾಗಾದರೆ ಈ ತಾಲ್ಲೂಕಿನಲ್ಲಿ ಯಾವ ರಸ್ತೆ ಇಲ್ಲವೇ ?

† ಶ್ರೀ ಬಸವರಾಜ ಮಾಗಾವಿ.—ಎಲ್ಲ ರಸ್ತೆಗಳು ತಾಲ್ಲೂಕ ಬೋರ್ಡ ರಸ್ತೆಗಳಾಗಿವೆ.

ಶ್ರೀ ಜಿ. ರಾಮೇಗೌಡ.—ಇದನ್ನು ಪರಿಶೀಲನೆಯಾಗುವುದು ಎಂದು ಹೇಳಿದ್ದೀರಿ. ಹಾಗಾದರೆ ಪರಿಶೀಲನೆ ಮಾಡಿ ಪಿ. ಡಬ್ಲ್ಯೂ. ಡಿ. ಗೆ ಸೇರಿಸುವುದಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—ಈಗಾಗಲೇ 11,145 ಮೈಲಿ ರಸ್ತೆ ಪಿ. ಡಬ್ಲ್ಯೂ. ಡಿ. ತೆಗೆದುಕೊಂಡಿರುವುದು ನುವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಹಾಗು ಅದಕ್ಕೆ ಬೇಕಾಗುವ ಹೆಚ್ಚಿನ ಹಣ ಇಲ್ಲ, ಆದುದರಿಂದ ಪರಿಶೀಲನೆಯಾಗುವುದು ಎಂದು ಹೇಳಿದೆ. ಮುಖ್ಯವಾಗಿ ಹಣ ದೊರೆತರೆ ಈ ರಸ್ತೆ ತೆಗೆದುಕೊಳ್ಳಬೇಕು ಎನ್ನುವುದನ್ನು ಪರ್ಯಾಲೋಚಿಸುತ್ತಿದ್ದೇವೆ. ತೀವ್ರ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯಸದಸ್ಯರು.—ಸಾಗರ ತಾಲ್ಲೂಕಿನಲ್ಲಿ ಎಷ್ಟು ಮೈಲಿ ರಸ್ತೆ ತೆಗೆದುಕೊಂಡಿದೆ ?

ಶ್ರೀ ಬಸವರಾಜ ಮಾಗಾವಿ.—ಈ ಮಾಹಿತಿ ನನ್ನ ಹತ್ತಿರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri H. M. CHANNABASAPPA.—In the matter of taking over of roads to P. W. D. for maintenance, have the Government prescribed any norms ?

Sri BASAVARAJ MAGAVI.—Yes, it depends upon the importance of the roads, tourist traffic, and such other things. The fact is now since we have taken more than 1145 miles to the possession of the P. W. D. and we are not in a position to bring them to our standard, we have withheld further taking over of roads till such time we are able to bring these roads to a particular specification.

Allotment of Central aid under Agricultural Development Programme in Tumkur District

146. Sri G. T. GOVINDA REDDY (Madhugiri). —

Will the Minister for Development be pleased to state :—

(*a*) the taluk of Tumkur District to which the Centeral financial aid for giving loans to ryots for wells and pumpsets as per the Agricultural Development Programme, is applicable ;